ಆ) ಮಹದೇವ ಜವಳಿ ಗಿರಣಿ.

ಇ) ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ.

ಕಾವೇರಿ ವಿವಾದದ ಸಂಬಂಧಪಟ್ಟ ಕರೆ ಕೊಟ್ಟ ಬಂದ್ ಸಂದರ್ಭದಲ್ಲಿ ಕೈಗಾರಿಕೆಗಳಿಗೆ ಉಂಟಾದ ನಷ್ಟ

309 (523) ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಇತ್ತೀಚಿನ ಕಾವೇರಿ ವಿವಾದದ ಸಂಬಂಧ ಕರೆ ಕೊಟ್ಟಿದ್ದ ಬಂದ್ ಸಂದರ್ಭದಲ್ಲಿ ರಾಜ್ಯದಲ್ಲಿ ಬೃಹತ್ ಕೈಗಾರಿಕೆಗಳು, ಮಧ್ಯಮ ಕೈಗಾರಿಕೆಗಳು ಹಾಗೂ ಸಣ್ಣ ಕೈಗಾರಿಕೆಗಳು ಕೆಲವು ಕಡೆ ತೀವ್ರವಾದ ನಷ್ಟವನ್ನು ಅನುಭವಿಸಿರುವುದು ನಿಜ ಅಲ್ಲವೇ?

ಆ) ಹಾಗಿದ್ದಲ್ಲಿ ರಾಜ್ಯದ ಯಾವ ಯಾವ ಭಾಗಗಳಲ್ಲಿ ಮೇಲ್ಕಂಡ ಕೈಗಾರಿಕೆಗಳು ಬಂದ್‌ನ ಸಂದರ್ಭದಲ್ಲಿ ತೀವ್ರವಾದ ನಷ್ಟವನ್ನು ಅನುಭವಿಸಿದೆ, ಆ ಕೈಗಾರಿಕೆಗಳ ಹೆಸರು ಮತ್ತು ಅವು ಅನುಭವಿಸಿದ ನಷ್ಟದ ವಿವರಗಳನ್ನು ನೀಡುವುದು? (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು)

ಇ) ಕೈಗಾರಿಕಾ ಸಂಸ್ಥೆಗಳು ಅನುಭವಿಸಿದ ನಷ್ಟವನ್ನು ಪತ್ತೆ ಹಚ್ಚುವ ಸಲುವಾಗಿ ಸರ್ಕಾರ ಸಮಿತಿಯನ್ನೇನಾದರೂ ರಚಿಸಿದೆಯೇ? ರಚಿಸಿದಲ್ಲಿ ಆ ಸಮಿತಿಯಲ್ಲಿ ಇರುವ ಸದಸ್ಯರು ಯಾರು?

ಈ) ಈ ಸಮಿತಿಯ ಅಧ್ಯಯನ ನಡೆಸಿ ಸರ್ಕಾರಕ್ಕೆ ತನ್ನ ವರದಿಯನ್ನು ನೀಡಿದೆಯೇ?

ಉ) ನೀಡಿದ್ದಲ್ಲಿ ಸರ್ಕಾರ ಆ ವರದಿಯ ಮೇಲೆ ಕೈಗೊಂಡಿರುವ ಕ್ರಮಗಳೇನು ?

ಊ) ನಷ್ಟ ಅನುಭವಿಸಿರುವ ಕೈಗಾರಿಕೆಗಳಿಗೆ ಪರಿಹಾರವನ್ನು ನೀಡಿದ್ದರೆ ಅದರ ಮೊತ್ತವನ್ನು ತಿಳಿಸುವುದು? (ಪ್ರತಿ ಕೈಗಾರಿಕೆಗೆ ನೀಡಿರುವ ಪರಿಹಾರದ ಬಗ್ಗೆ ಪ್ರತ್ಯೇಕ ವಿವರಗಳನ್ನು ನೀಡುವುದು)

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-

ಅ) ಹೌದು.

ಆ) ರಾಜ್ಯದ ಬೆಂಗಳೂರು ಮತ್ತು ಮೈಸೂರು ಭಾಗಗಳಲ್ಲಿ ಬಂದ್‌ನ ಪ್ರಯುಕ್ತ 13-12-1991 ರಂದು ಸಣ್ಣ ಕೈಗಾರಿಕೆಗಳು ಬಾರೀ ಮತ್ತು ಮಧ್ಯಮ ಕೈಗಾರಿಕೆಗಳು ಈ ಕೆಳಕಂಡ ನಷ್ಟವನ್ನು ಅನುಭವಿಸಿದೆ.

ಕ್ರಮ ಸಂಖ್ಯೆ	ಹೆಸರು, ವಿಳಾಸ ಮತ್ತು ಸ್ಥಳ	ಹಾನಿಗೊಳಗಾದ ಘಟಕಗಳ ಸಂಖ್ಯೆ	ಅಂದಾಜು ಮೆಚ್ಚಿ (ಲಕ್ಷಗಳಲ್ಲಿ)
1.	ರಾಜಾಜಿನಗರ ಕೈಗಾರಿಕಾ ನಗರ, ಬೆಂಗಳೂರು-44.	30	680.63
2.	ರಾಜಾಜಿನಗರ ಕೈಗಾರಿಕಾ ಪ್ರದೇಶ ಬೆಂಗಳೂರು-10.	17	11.66
3.	ಮಾಗಡಿ ರಸ್ತೆ ಬೆಂಗಳೂರು-29.	12	193.25
4.	ಕಾಮಾಕ್ಷಿಪಾಳ್ಯ, ಕಮಲಾನಗರ, ಸುಂಕದಕಟ್ಟೆ, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು	19	612.02
5.	ಪೀಣ್ಯಾ ಕೈಗಾರಿಕಾ ಪ್ರದೇಶ, ಬೆಂಗಳೂರು-58.	11	4.67
6.	ಕುರುಬರಹಳ್ಳಿ, ಬೆಂಗಳೂರು-86.	5	5.25
7.	ಬಾಪೂಜಿನಗರ, ತುಮಕೂರು ರಸ್ತೆ, ಬೆಂಗಳೂರು.	2	2.23
8.	ಮೈಸೂರು ಮತ್ತು ನಂಜನಗೂಡು	24	42.00